**<u>O.S.No.731/2020 - P.W.1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 18-01-2024.</u>**

**<u>ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :</u>**

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ದಾವಾ ಸ್ವತ್ತಿ ಪಹಣಿ ಪತ್ರಿಕೆಯನ್ನು ಮತ್ತು ಮ್ಯುಟೇಶನ್ ರಿಜಿಸ್ಟರಿನ ಪ್ರತಿಯನ್ನು - ನಿ.ಪಿ.1 ಮತ್ತು ನಿ.ಪಿ.2 ಎಂದು, ಕಾನೂನು ನೋಟೀಸು ದಿ.17-10-2019 ರ ಕಛೇರಿಯ ಪ್ರತಿಯನ್ನು - ನಿ.ಪಿ.3 ಎಂದು, ಆರು ಅಂಚೆ ರಶೀದಿಗಳನ್ನು - ಒಟ್ಟಾಗಿ ನಿ.ಪಿ.4 ಎಂದು, ಐದು ಅಂಚೆ ಸ್ವೀಕೃತಿಗಳನು - ನಿ.ಪಿ.5 ರಿಂದ ನಿ.ಪಿ.9 ಎಂದು, 4 ಮತ್ತು 7 ನೇ ಪ್ರತಿವಾದಿಗಳಿಗೆ ಜಾರಿಯಾಗದೇ ವಾಪಸ್ಸು ಬಂದಿರುವ ಆರ್.ಪಿ.ಎ.ಡಿ. ಕವರ್ ಗಳನ್ನು - ನಿ.ಪಿ.10 ಮತ್ತು ನಿ.ಪಿ.11 ಎಂದು ಗುರುತಿಸಲಾಯಿತು. ಸದರಿ ಆರ್.ಪಿ.ಎ.ಡಿ. ಕವರ್ ಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿರುವ ನೋಟೀಸಿನ ಪ್ರತಿಗಳನ್ನು - ನಿ.ಪಿ.10(ಎ) ಮತ್ತು ನಿ.ಪಿ.11(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರರು ನೋಂದಾಯಿಸದ ಕ್ರಯದ ಕರಾರು ಪತ್ರ ದಿ.18-07-2017 ನ್ನು ಗುರುತಿಸಲು ಕೋರಿರುತ್ತಾರೆ, ಸದರಿ ದಾಖಲೆಯ ಮೇಲೆ ಸರಿಯಾದ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸುವ ಬಗ್ಗೆ ಸುನಾವಣೆಗಾಗಿ ಹಾಗೂ ವಾದಿಗಳು ಹಾಜರುಪಡಿಸಿರುವ ಕ್ಯಾಶ್ ಓಚರ್‌ಗಳ ಬಗ್ಗೆ ಸುನಾವಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**